

ಭಯ, ನಿದ್ದೆಯಲ್ಲಿ ನಡೆಯುವುದು, ನಿದ್ದೆಯಲ್ಲಿ ಮಾತನಾಡುವುದು ಇವೆಲ್ಲ ನಿತ್ಯವೂ ನಡೆಯುತ್ತಿದ್ದ ಘಟನೆಗಳು. ನನ್ನ ಮೈಯೊಳಗೆ ಭೂತವಿದೆಯೆಂದು ಎಲ್ಲರೂ ಹೇಳುತಿದ್ದರು. ಹೀಗಾಗಿ, ಈ ಘಟನೆ ನನಗೆ ಮರೆತೇ ಹೋಯಿತು. ಹಗಲಿನಲ್ಲಿ ರಜಾಯಿ ನಿರುಪದ್ರವಿಯಾಗಿ ಕಾಣಿಸುತ್ತಿತ್ತು.

ಆದರೆ, ಮರುದಿನ ರಾತ್ರಿ ಮತ್ತೆ ನನಗೆ ಎಚ್ಚರವಾಯಿತು. ರಬ್ಬು ಮತ್ತು ಬೇಗಮ್ ಜಾನ್ ಪಿಸುದನಿಯಲ್ಲಿ ಚರ್ಚೆ ಮಾಡುವುದು ಕೇಳಿಸಿತು. ಜಗಳದ ಕಾರಣ ನನಗೆ ಗೊತ್ತಾಗಲಿಲ್ಲ. ಆದರೆ, ರಬ್ಬು ಅಳುವ ಧ್ವನಿ ಕೇಳಿಸಿತು. ಆಮೇಲೆ ನನಗೆ ಬೆಕ್ಕು ತಟ್ಟೆಯೊಂದನ್ನು ಚಪ್ಪರಿಸುವ ಶಬ್ದ ಕೇಳಿಸಿತು... ನನಗೆ ಭಯವಾಗಿ ನಿದ್ದೆ ಹೋಗಿ ಬಿಟ್ಟೆ.

ಅದರ ಮಾರನೇ ದಿನ ರಬ್ಬು ತನ್ನ ನಾಲಾಯಕ್ ಮಗನನ್ನು ಭೇಟಿಯಾಗಲು ಹೋದಳು. ಅದಾಗಲೇ ಬೇಗಮ್ ಜಾನ್ ಅವನಿಗೆ ಸಾಕಷ್ಟು ಸಹಾಯ ಮಾಡಿದ್ದಳು–ಅವನಿಗೆ ಅಂಗಡಿ ಹಾಕಿ ಕೊಡುವುದು, ಹಳ್ಳಿಯ ಅಂಗಡಿಯಲ್ಲಿ ಕೆಲಸ ಕೊಡಿಸುವುದು ಹೀಗೆ. ಅವನಿಗೆ ಮಾತ್ರ ಇದ್ಯಾವುದೂ ಸಾಕಾಗಿರಲಿಲ್ಲ. ಕೆಲವು ಕಾಲ ಅವನು ನವಾಬ್ ಸಾಬ್‌ನ ಜೊತೆಯಲ್ಲಿದ್ದನು. ನವಾಬ್ ಅವನಿಗೆ ಹೊಸ ಉಡುಪುಗಳನ್ನೂ ಉಡುಗೊರೆಗಳನ್ನೂ ಕೊಟ್ಟಿದ್ದನು. ಆದರೂ ಅದ್ಯಾಕೋ ಅವನು ಎಲ್ಲ ಬಿಟ್ಟು ಓಡಿ ಹೋದವನು ರಬ್ಬುವನ್ನು ನೋಡಲೂ ಬಂದಿರಲಿಲ್ಲ.

ರಬ್ಬು ಮಗನನ್ನು ನೋಡಲು ಸಂಬಂಧಿಕರ ಮನೆಗೆ ಹೋದಳು. ಅವಳನ್ನು ಹೋಗಗೊಡಲು ಬೇಗಂ ಜಾನ್‌ಳಿಗೆ ಮನಸಿಲ್ಲದಿದ್ದರೂ ರಬ್ಬು ಈ ವಿಷಯದಲ್ಲಿ ಅಸಹಾಯಕಳು ಎಂದು ತಿಳಿದೇ ಇತ್ತು. ಆದ್ದರಿಂದ ಬೇಡವೆನ್ನಲಿಲ್ಲ.

ಆವತ್ತೆಲ್ಲಾ ಬೇಗಮ್ ಜಾನ್ ಏನೋ ಒಂಥರಾ ಇದ್ದಳು. ಎಲ್ಲ ಕಡೆ ನೋವು ಎಂದರೂ ಯಾರನ್ನೂ ಮುಟ್ಟಲು ಬಿಡುತ್ತಿರಲಿಲ್ಲ. ಇಡೀ ದಿನ ಏನನ್ನೂ ತಿನ್ನದೇ ಮಾಡದೇ ಹಾಸಿಗೆ ಮೇಲೆ ಬಿದ್ದುಕೊಂಡಿದ್ದಳು.

"ಬೇಗಂ ಜಾನ್ ನಾನು ನಿಮ್ಮ ಬೆನ್ನನ್ನು ತಿಕ್ಕಲೇ?..."